# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2015-16ನೇ ಸಾಲಿನಲ್ಲಿ MSDP ಯೋಜನೆಯಡಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಲಾಗಿರುವ ಸ್ಥಳಗಳಲ್ಲಿ 30 ವಿದ್ಯಾರ್ಥಿನಿಲಯಗಳು/ವಸತಿ ಶಾಲೆ/ವಸತಿ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ.

**ಓದಲಾಗಿದೆ:-**
1. 2015-16ನೇ ಸಾಲಿನ ಆಯವ್ಯಯ ಭಾಷಣ.
2. ಭಾರತ ಸರ್ಕಾರದ ಬಹುವಲಯವಾರು 11ನೇ ಪಂಚವಾರ್ಷಿಕ ಯೋಜನೆಯ ಮಾರ್ಗಸೂಚಿಗಳು.
3. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಏಕಕಡತ ಪ್ರಸ್ತಾವನೆ ಸಂಖ್ಯೆ: ಅಸಂನಿ/ಎಂ.ಎಸ್.ಡಿ.ಪಿ/ಸಿಆರ್-86/ 2015-16 ದಿನಾಂಕ: 17.10.2015.

>>>()<<<

**ಪ್ರಸ್ತಾವನೆ:-**

ಈ ಯೋಜನೆಯು ಮುಂದುವರೆದ ಕಾರ್ಯಕ್ರಮವಾಗಿದ್ದು, ಈ ಯೋಜನೆಯಡಿಯಲ್ಲಿ ಮೇಲೆ ಓದಲಾದ ಕ್ರ.ಸಂ (1)ರಲ್ಲಿ 2015-16ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯ ಭಾಷಣ ಕಂಡಿಕೆ 240ರಲ್ಲಿ MSDP ಯೋಜನೆಯಡಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಲಾಗಿರುವ ಸ್ಥಳಗಳಲ್ಲಿ 30 ವಿದ್ಯಾರ್ಥಿನಿಲಯಗಳು/ವಸತಿ ಶಾಲೆ/ವಸತಿ ಕಾಲೇಜುಗಳನ್ನು ಪ್ರಾರಂಭಿಸಲಾಗುವುದೆಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ (2)ರಲ್ಲಿ ಕೇಂದ್ರ ಸರ್ಕಾರದ ಬಹುವಲಯವಾರು ಯೋಜನೆಯಡಿ (MSDP) ಅಲ್ಪಸಂಖ್ಯಾತರ ಇಲಾಖೆಯಿಂದ 07 ಜಿಲ್ಲೆಗಳಾದ 1) ಬೀದರ್, 2) ಗುಲ್ಬರ್ಗಾ, 3) ಬಾಗಲಕೋಟೆ 4) ರಾಯಚೂರು, 5) ಕೊಪ್ಪಳ, 6) ಹಾವೇರಿ ಮತ್ತು 7) ಬಳ್ಳಾರಿ ಜಿಲ್ಲೆಗಳಲ್ಲಿ ಹಾಸ್ಟಲ್ ಕಟ್ಟಡಗಳು, ಲೇಬರ್ ವಾರ್ಡ್ ನಿರ್ಮಾಣ, ಅಂಗನವಾಡಿ ಕೇಂದ್ರ ಕಟ್ಟಡಗಳು, ಶೌಚಾಲಯಗಳ ನಿರ್ಮಾಣ, ಪ್ರಯೋಗ ಶಾಲೆ, ಹೆಚ್ಚುವರಿ ಕೊಠಡಿಗಳು, ಇಂದಿರಾ ಆವಾಜ್ ಯೋಜನೆಯಡಿ ಮನೆಗಳ ನಿರ್ಮಾಣ ಇತ್ಯಾದಿ ಮಾಡಲು ಈ ಯೋಜನೆಯನ್ನು ಜಿಲ್ಲೆಯ ಜಿಲ್ಲಾಧಿಕಾರಿಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.

ಮೇಲೆ ಓದಲಾದ ಕ್ರ.ಸಂ (3)ರಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಇವರು ಏಕಕಡತದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ ಕೇಂದ್ರ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಮಂತ್ರಾಲಯವು MSDP ಯೋಜನೆಯಡಿ ಇಪ್ಪತ್ತೊಂದು ಹೊಸ ವಿದ್ಯಾರ್ಥಿನಿಲಯಗಳು, ಏಳು ಹೊಸ ಮೊರಾರ್ಜಿದೇಸಾಯಿ ವಸತಿ ಶಾಲೆಗಳು, ಎರಡು ಹೊಸ ಮೊರಾರ್ಜಿದೇಸಾಯಿ ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳ ನಿರ್ಮಾಣ ಮಾಡಲಾಗಿದ್ದು ಇವುಗಳಿಗೆ ವಿದ್ಯಾರ್ಥಿನಿಲಯಗಳು/ವಸತಿ ಶಾಲೆ/ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಿ ಆದೇಶ ಹೊರಡಿಸಲು ಕೋರಿರುತ್ತಾರೆ.

........2.